ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಕರ್ನಾಟಕ ವಿಧಾನ ಮಂಡಲ

ಪತ್ರಿಕೆಯ ಹೆಸರು : NAME OF THE NEWS PAPER : ಉದಯವಾಣಿ   ದಿನಾಂಕ : DATE : 4/11/19

# ಇನ್ನೂ ಆಸ್ತಿ ವಿವರ ಸಲ್ಲಿಸದ 36 ಶಾಸಕರು

ಉದಯ 4/11/19

**ಬೆಂಗಳೂರು:** ಆಸ್ತಿ ವಿವರ ಸಲ್ಲಿಸಲು ಲೋಕಾಯುಕ್ತ ಗಡುವು ನೀಡಿ ಹತ್ತು ದಿನ ಕಳೆದರೂ ಹಲವು ಶಾಸಕರು ಇನ್ನೂ ಆಸ್ತಿ ವಿವರ ನೀಡದ ನಿರ್ಲಕ್ಷ್ಯ ಧೋರಣೆ ಮುಂದುವರಿಸಿದ್ದಾರೆ.

ಅ.13ರಂದು ಕರ್ನಾಟಕ ಲೋಕಾಯುಕ್ತ 43 ಶಾಸಕರು ಹಾಗೂ 26 ವಿಧಾನ ಪರಿಷತ್ ಸದಸ್ಯರಿಗೆ 10 ದಿನದೊಳಗೆ ಆಸ್ತಿ ವಿವರ ಸಲ್ಲಿಸುವಂತೆ ಖಡಕ್ ಸೂಚನೆ ನೀಡಿತ್ತು. ಇಷ್ಟಾದರೂ, 24 ಶಾಸಕರು ಹಾಗೂ 12 ವಿಧಾನ ಪರಿಷತ್ ಸದಸ್ಯರು ತಮ್ಮ ಆಸ್ತಿ ವಿವರಗಳನ್ನು ಲೋಕಾಯುಕ್ತಕ್ಕೆ ನೀಡಿಲ್ಲ.

ಅ.23ರೊಳಗೆ ಕಡ್ಡಾಯವಾಗಿ ತಮ್ಮ ಆಸ್ತಿ ವಿವರಗಳನ್ನು ಸಲ್ಲಿಸುವಂತೆ ಸೂಚಿಸಿ ಜನಪ್ರತಿನಿಧಿಗಳಿಗೆ ಅ.13ರಂದು ಶೋಕಾಸ್ ನೋಟಿಸ್ ಜಾರಿ ಮಾಡಲಾಗಿತ್ತು. ಹೀಗಿದ್ದರೂ, ನೋಟಿಸ್ ಪಡೆದುಕೊಂಡಿರುವ ಸದಸ್ಯರ ಪೈಕಿ ಶೇ.50ರಷ್ಟು ಸದಸ್ಯರು ಆಸ್ತಿ ವಿವರ ಸಲ್ಲಿಸಲು ಆಸಕ್ತಿ ತೋರಿಲ್ಲ.

- **ಅಕ್ಟೋಬರ್ 23ರ ಒಳಗೆ ಸಲ್ಲಿಸಬೇಕಾಗಿದ್ದ ಆಸ್ತಿ ವಿವರ**
- **ಲೋಕಾಯುಕ್ತ ನೋಟೀಸ್‌ಗೆ ಡೋಂಟ್‌ಕೇರ್!**

ನಿಗದಿತ ಸಮಯದಲ್ಲಿ ಆಸ್ತಿ ವಿವರ ಸಲ್ಲಿಸದ ಶಾಸಕರ ಪಟ್ಟಿಯಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಯಿಂದ ತಲಾ 9 ಸದಸ್ಯರು, ಜೆಡಿಎಸ್‌ನಿಂದ ಮೂವರು, ಇಬ್ಬರು ಅನರ್ಹ ಶಾಸಕರು ಮತ್ತು ಬಿಎಸ್‌ಪಿಯಿಂದ ಉಚ್ಚಾಟಿತ ಶಾಸಕ ಎನ್.ಮಹೇಶ್ ಹೆಸರಿದೆ.

ಬಿಜೆಪಿಯಿಂದ ಎಂ.ಪಿ.ರೇಣುಕಾಚಾರ್ಯ, ಡಿ.ಎಸ್ .ಹೊಲಗೇರಿ, ರೂಪಾಲಿ ಸಂತೋಷ್ ನಾಯಕ್, ದಿನಕರ್ ಕೇಶವ ಶೆಟ್ಟಿ, ಜಿ.ಬಿ. ಜ್ಯೋತಿಗಣೇಶ್, ಹರೀಶ್ ಪೂಂಜ, ಎಂ.ವೈ. ಪಾಟೀಲ್, ಸತೀಶ್ ರೆಡ್ಡಿ ರಾಜಕುಮಾರ್ ಪಾಟೀಲ್ ಹೆಸರುಗಳಿವೆ.

▶ 6ನೇ ಪುಟಕ್ಕೆ

# ಇನ್ನೂ ಆಸ್ತಿ ವಿವರ ಸಲ್ಲಿಸದ 36 ಶಾಸಕರು

ಉದಯ 4/11/19

1ನೇ ಪುಟದಿಂದ ▶ ಕಾಂಗ್ರೆಸ್‌ನಿಂದ ಜಮೀರ್ ಅಹ್ಮದ್ ಖಾನ್, ರಹೀಮ್ ಖಾನ್, ಬಿ.ನಾರಾಯಣ ರಾವ್, ಟಿ.ಡಿ.ರಾಜೇಗೌಡ, ವೆಂಕಟರಮಣಪ್ಪ, ರೂಪಕಲಾ, ಟಿ.ವೆಂಕಟರಮಣಯ್ಯ, ಕೆ.ವೈ. ನಂಜೇಗೌಡ, ಕುಸುಮತಿ ಶಿವಳ್ಳಿ ಹೆಸರುಗಳಿವೆ. ಜೆಡಿಎಸ್‌ನ ಸಿ.ಎನ್.ಬಾಲಕೃಷ್ಣ,ಎಂ.ಶ್ರೀನಿವಾಸ್,ಎಂ.ಸಿ.ಮನಗೂಳಿ ಹಾಗೂ ಅನರ್ಹಗೊಂಡಿರುವ ಶಾಸಕರಾದ ಅಡಗೂರು ಎಚ್ .ವಿಶ್ವನಾಥ್ ಮತ್ತು ಆರ್. ಶಂಕರ್ ಹೆಸರುಗಳು ಪಟ್ಟಿಯಲ್ಲಿವೆ.

ವಿಧಾನ ಪರಿಷತ್ ಸದಸ್ಯರ ಪೈಕಿ ಕಾಂಗ್ರೆಸ್‌ನ ಸದಸ್ಯರು 6, ಜೆಡಿಎಸ್ ಮತ್ತು ಬಿಜೆಪಿ ತಲಾ 3 ಜನ ಸೇರಿದಂತೆ ಒಟ್ಟು 12 ಸದಸ್ಯರು ಆಸ್ತಿ ವಿವರ ಸಲ್ಲಿಕೆ ಮಾಡಿಲ್ಲ ಎಂದು ದಾಖಲೆಗಳು ಸ್ಪಷ್ಟಪಡಿಸಿವೆ. ಆಯನೂರು ಮಂಜುನಾಥ್ , ಅಲ್ಲಂ ವೀರಭದ್ರಪ್ಪ, ತೇಜಸ್ವಿನಿ ಗೌಡ, ಕೆ.ಟಿ.ಶ್ರೀಕಂಠೇಗೌಡ, ಕಾಂತರಾಜು, ಎನ್. ಅಪ್ಪಾಜಿಗೌಡ, ಕೆ.ಪಿ.ನಂಜುಂಡಿ, ನಜೀರ್ ಅಹ್ಮದ್, ಡಿ.ಯು.ಮಲ್ಲಿಕಾರ್ಜುನ, ಎಂ.ನಾರಾಯಣಸ್ವಾಮಿ, ಪಿ.ಆರ್ ರಮೇಶ್, ಸಿ.ಎಂ.ಇಬ್ರಾಹಿಂ ಹೆಸರುಗಳು ಪಟ್ಟಿಯಲ್ಲಿ ಕಾಣಿಸಿಕೊಂಡಿವೆ.

ಪ್ರತಿವರ್ಷ ರಾಜ್ಯದ ಎಲ್ಲಾ ಶಾಸಕರು ಮತ್ತು ವಿಧಾನ ಪರಿಷತ್ ಸದಸ್ಯರು ತಮ್ಮ ಆಸ್ತಿ ವಿವರಗಳನ್ನು ಕಡ್ಡಾಯವಾಗಿ ಲೋಕಾಯುಕ್ತ ಕಚೇರಿಗೆ ಸಲ್ಲಿಸಬೇಕು. ಆದರೆ, ಇತ್ತೀಚೆಗೆ ಹಲವರು ಆಸ್ತಿ ವಿವರಗಳನ್ನು ಸಲ್ಲಿಸುತ್ತಿಲ್ಲ. ಈ ರೀತಿ ಕಾನೂನನ್ನು ಉಲ್ಲಂಘಿಸುವ ಜನಪ್ರತಿನಿಧಿಗಳ ವಿರುದ್ಧ ಕಾನೂನು ಕ್ರಮ ಜರುಗಿಸುವ ಅವಕಾಶ ಲೋಕಾಯುಕ್ತಕ್ಕಿದೆ. ನನ್ನ ಅವಧಿಯಲ್ಲಿ ಆಸ್ತಿ ವಿವರ ಸಲ್ಲಿಸದ ಶಾಸಕರ ವಿರುದ್ಧ, ಐಪಿಸಿ ಸೆಕ್ಷನ್ 176ರ ಅನ್ವಯ ಕ್ರಿಮಿನಲ್ ಮೊಕದ್ದಮೆ ದಾಖಲಿಸಿದ್ದೆ. ಒಂದು ವೇಳೆ ತಪ್ಪು ಮಾಹಿತಿ ನೀಡಿದ್ದಲ್ಲಿ ಐಪಿಸಿ ಸೆಕ್ಷನ್ 177ರ ಅನ್ವಯ ಕ್ರಮ ಜರುಗಿಸಬಹುದು.

- ನ್ಯಾ.ಸಂತೋಷ್ ಹೆಗ್ಡೆ, ನಿ.ಲೋಕಾಯುಕ್ತ

## ಐಪಿಸಿ ಸೆಕ್ಷನ್ 176 ಮತ್ತು 177

ಕಾನೂನಿನಡಿ ಬರುವ ಯಾವುದೇ ವ್ಯಕ್ತಿಯು (ಜನಪ್ರತಿನಿಧಿ) ಬಳಿ ಸರ್ಕಾರಿ ಅಧಿಕಾರಿಗಳು ಕೋರಿರುವ ಮಾಹಿತಿ ನೀಡದಿದ್ದರೆ ಐಪಿಸಿ ಸೆಕ್ಷನ್ 176ರ ಅಡಿ ಅಪರಾಧ ಎಂದು ಪರಿಗಣಿಸಲಾಗುತ್ತದೆ. ಬಳಿಕ ಮಾಹಿತಿ ಒದಗಿಸದ ವ್ಯಕ್ತಿ ಮಾಹಿತಿ ಕೊಡುವಲ್ಲಿ ತಿಳಿಯದೆ ವಿಳಂಬ ಮಾಡಿದ್ದರೆ, ಒಂದು ತಿಂಗಳ ಕಾಲ ಜೈಲು ಅಥವಾ 500ರೂ. ದಂಡ ಅಥವಾ ಈ ಎರಡೂ ಶಿಕ್ಷೆ ವಿಧಿಸಬಹುದು. ಒಂದು ವೇಳೆ ಉದ್ದೇಶಪೂರ್ವಕವಾಗಿ ಮಾಹಿತಿ ಒದಗಿಸದಿದ್ದರೆ 6ತಿಂಗಳು ಜೈಲು ಅಥವಾ ಒಂದು ಸಾವಿರ ರೂ. ದಂಡ ಅಥವಾ ಎರಡೂ ಶಿಕ್ಷೆಗೆ ಗುರಿಪಡಿಸಬಹುದು. ಜನಪ್ರತಿನಿಧಿ ನೀಡಿರುವ ಮಾಹಿತಿಯಲ್ಲಿ ಲೋಪ ಕಂಡುಬಂದಲ್ಲಿ ಐಪಿಸಿ ಸೆಕ್ಷನ್ 177ರ ಅನ್ವಯ 6ತಿಂಗಳುಗಳ ಕಾಲ ಜೈಲು ವಾಸಕ್ಕೆ ಗುರಿಪಡಿಸಬಹುದಾಗಿದೆ.

## ಲೋಕಾಯುಕ್ತ ಏನು ಮಾಡಬಹುದು ?

- ಆಸ್ತಿ ವಿವರ ಒದಗಿಸಲು ಗಡುವು ನಿಗಧಿಪಡಿಸಿ ನೋಟಿಸ್ ನೀಡಬೇಕು
- ವಿವರ ಒದಗಿಸದ ಜನಪ್ರತಿನಿಧಿಗಳ ಪಟ್ಟಿಯನ್ನು ರಾಜ್ಯಪಾಲರಿಗೆ ನೀಡಬೇಕು
- ವಿವರ ಸಲ್ಲಿಸದ ಜನಪ್ರತಿನಿಧಿಗಳ ಮಾಹಿತಿಯನ್ನು 3 ಪತ್ರಿಕೆಗಳಲ್ಲಿ ಪ್ರಕಟಿಸಬೇಕು.
- ಲೋಕಾಯುಕ್ತರಿಗೆ ಆಸಕ್ತಿಯಿದ್ದರೆ ಐಪಿಸಿ ಸೆಕ್ಷನ್ 176 ಅಡಿ ಕ್ರಿಮಿನಲ್ ದೂರು ದಾಖಲಿಸಬಹುದು.